**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ.**

**ಸಿ.ಸಿ ನಂಃ 504/ 2015**

| | | |
|---|---|---|
| ಸಾಕ್ಷಿಯ ಹೆಸರುಃ | ಹೆಚ್.ಎನ್ ಸಿದ್ದಯ್ಯ | ಫ್ರಾಸಾಃ 21 |
| ತಂದೆಯ ಹೆಸರುಃ | ಲೇಟ್ ನಿಂಗಯ್ಯ | ಚಾಸಾ: 35 |
| ವಯಸ್ಸುಃ | 63 ವರ್ಷ | ದಿಃ 10-02-2025 |
| ಉದ್ಯೋಗಃ | ನಿವೃತ್ತ ಪೋಲಿಸ್ ಉಪಾಧೀಕ್ಷಕರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಹಾಸನ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2013 ರಿಂದ 2016 ರವರೆಗೆ ಕೆ ಆರ್ ನಗರದ ವೃತ್ತ ನೀರಿಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 02.10.2014 ರಂದು ಈ ಪ್ರಕರಣದ ಕಡತವನ್ನು ಚಾಸಾ-34 ರವರಿಂದ ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ನಾನು ಕೆ ಆರ್ ನಗರದ ಸರಕಾರಿ ಆಸ್ಪತ್ರೆಗೆ ಹೋಗಿ ಪಂಚರಾದ ಚಾಸಾ-18 ರಿಂದ 20 ರವರಿಗೆ ನೋಟಿಸು ನೀಡಿ ಸದರಿಯವರ ಸಮಕ್ಷಮದಲ್ಲಿ ಬೆಳಿಗ್ಗೆ 7.00 ಗಂಟೆಯಿಂದ 9.30 ಗಂಟೆ ವರೆಗೆ ಮೃತ ನಿಂಗಮ್ಮರವರ ಶವ ತನಿಖೆಯನ್ನು ನಡೆಸಿರುತ್ತೇನೆ. ಶವ ತನಿಖಾ ಕಾಲದಲ್ಲಿ ಚಾಸಾ-16 ಮತ್ತು 17 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಮರಣೋತ್ತರ ಪರೀಕ್ಷೆ ನಡೆಸಲು ಶವವನ್ನು ಚಾಸಾ-29 ರವರ ಬೆಂಗಾಲಿವನೊಂದಿಗೆ ವೈದ್ಯಾಧಿಕಾರಿಯಾದ ಚಾಸಾ-27 ರವರಿಗೆ ಹಸ್ತಾಂತರಿಸಿರುತ್ತೇನೆ.

ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡಿ ನಾನು ಚಾಸಾ-5 ರಿಂದ ಚಾಸಾ-11 ಮತ್ತು ಚಾಸಾ-13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಚಾಸಾ-1 ರವರು ತೋರಿಸಿಕೊಟ್ಟ ಮೇರೆಗೆ ಚಾಸಾ-5 ಮತ್ತು 6 ರವರ ಸಮಕ್ಷಮದಲ್ಲಿ ಘಟನಾ ಸ್ಥಳದ ಮಹಜರನ್ನು ನಾನು ಮಧ್ಯಾಹ್ನ 2.15 ಯಿಂದ 3.10 ಗಂಟೆಯವರೆಗೆ ಮಾಡಿ ಮುಗಿಸಿರುತ್ತೇನೆ. ಘಟನಾ ಸ್ಥಳದ ಮಹಜರನ್ನು ಮಾಡುವಾಗ ಚಾಸಾ-1 ರವರು ಮುದ್ದೆ ಮಾಲು-1 ರ ಬಿದಿರು ದೊಣ್ಣೆಯನ್ನು ಹಾಜರುಪಡಿಸಿದ್ದು, ಅದನ್ನು ಪಂಚರ ಸಮಕ್ಷಮ ನಾನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಘಟನಾ ಸ್ಥಳದ ಮಹಜರ್ ಮಾಡುವಾಗ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ಸಹ ತಯಾರಿಸಿರುತ್ತೇನೆ.

ನಂತರ ನಾನು ಠಾಣೆಗೆ ವಾಪಸ್ಸು ಬಂದಿದ್ದು, ಚಾಸಾ-29 ರವರು ಶವದ ಮೇಲಿನ ಬಟ್ಟೆಯನ್ನು ಮತ್ತು ವಿಸ್ರಾವವನ್ನು ಹಾಜರುಪಡಿಸಿದ್ದು, ಅವುಗಳನ್ನು ಪಂಚರಾದ ಚಾಸಾ-7 ಮತ್ತು ಚಾಸಾ-21 ರವರು ಸಮಕ್ಷಮದಲ್ಲಿ ಸಂಜೆ 4.30 ರಿಂದ 5.30 ರವೆರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಜಪ್ತಿಪಡಿಸಿಕೊಂಡಿರುತ್ತೇನೆ. ಜಪ್ತಿಪಡಿಸಿಕೊಂಡ ಮುದ್ದೆ ಮಾಲುಗಳನ್ನು ವಸ್ತು ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನೀವೇದಿಸಿಕೊಂಡಿರುತ್ತೇನೆ.

ದಿಃ 03.10.2014 ರಂದು ತನಿಖೆಯನ್ನು ಮುಂದುವರೆಸಿ ಚಾಸಾ-2 ರಿಂದ ಚಾಸಾ-4, ಚಾಸಾ-12, ಚಾಸಾ-14, ಚಾಸಾ-15 ಮತ್ತು ಚಾಸಾ-19 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಕೃತ್ಯ ನಡೆದ ಸ್ಥಳದ ಡಿಮಾಂಡ್ ರಿಜಿಸ್ಟರ್ ನ ನಕಲನ್ನು ನೀಡುವಂತೆ ನಾನು ಚಾಸಾ-22 ರವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿರುತ್ತೇನೆ ಹಾಗೂ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ನಾನು ಲೋಕೋಪಯೋಗಿ ಇಲಾಖೆಯವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಮೃತ ನಿಂಗಮ್ಮರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಎಂ.ಎಲ್.ಸಿ ನೀಡುವಂತೆ ನಾನು ಚಾಸಾ-26 ರವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ 06.10.2014 ರಂದು ಚಾಸಾ-27 ರವರಿಂದ ನಾನು ಮೃತ ನಿಂಗಮ್ಮರವರ ಮರಣೋತ್ತರ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕ 08.10.2014 ರಂದು ಶವದ ವಿಸ್ರಾವವನ್ನು ಚಾಸಾ-30 ರವರ ಮುಖಾಂತರ ರಾಸಾಯನಿಕ ಪರೀಕ್ಷೆಗಾಗಿ ಮೈಸೂರಿನ ಎಫ್.ಎಸ್.ಎಲ್ ಗೆ ಕಳುಹಿಸಿರುತ್ತೇನೆ.

ದಿನಾಂಕ 23.10.2014 ರಂದು ಮೃತ ನಿಂಗಮ್ಮರವರ ಆಸ್ಪತ್ರೆಯ ಕೆ-ಶೀಟು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕ 31.10.2014 ರಂದು ಚಾಸಾ-22 ರವರಿಂದ ನಾನು ಕೃತ್ಯ ನಡೆದ ಸ್ಥಳದ ಡಿಮಾಂಡ್ ರಿಜಿಸ್ಟರ್ ನ ನಕಲನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕ 22.11.2014 ರಂದು 1 ನೇ ಆರೋಪಿಯು ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನನ್ನು ಪಡೆದು ಠಾಣೆಗೆ ಹಾಜರಾಗಿದ್ದು, ದಸ್ತಗಿರಿ ಕ್ರಮವನ್ನು ಜರುಗಿಸಿ ಜಾಮೀನು ಪಡೆದು 1 ನೇ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 23.11.2014 ರಂದು ಎಫ್.ಎಸ್.ಎಲ್ ವರದಿಯನ್ನು ಪೋಲಿಸ್ ಉಪಾಧಿಕ್ಷಕರ ಕಚೇರಿಯಿಂದ ಸಿಬ್ಬಂದಿಯಾದ ಚಾಸಾ-30 ರವರ ಮೂಲಕ ಪಡೆದಿರುತ್ತೇನೆ.

ದಿನಾಂಕ 01.12.2014 ರಂದು ಈ ಪ್ರಕರಣದ 3 ನೇ ಆರೋಪಿಯನ್ನು ನಮ್ಮ ಠಾಣೆಯ ಸಿಬ್ಬಂದಿಗಳು ಮಧ್ಯಾಹ್ನ 3.00 ಗಂಟೆಗೆ ಭೇರ್ಯ ಗ್ರಾಮದಿಂದ ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿದ್ದು, ಆತನನ್ನು ವಿಚಾರಿಸಿ, ದಸ್ತಗಿರಿ ಕ್ರಮ ಜರುಗಿಸಿ, ಆರೋಪಿಯ ಸ್ವ-ಇಚ್ಛೆಯ ಹೇಳಿಕೆಯನ್ನು ಪಡೆದುಕೊಂಡು ನ್ಯಾಯಾಲಯದ ಆದೇಶಗಳನ್ನು ಪಾಲಿಸಿ ನಮ್ಮ ಸಿಬ್ಬಂದಿಗಳ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿನಾಂಕ 12.12.2014 ರಂದು ಚಾಸಾ-27 ರವರಿಗೆ ಪತ್ರವನ್ನು ಬರೆದು ಅಮಾನತ್ತು ಪಡಿಸಿರು ಮುದ್ದೆ ಮಾಲು-1 ರ ಮೇಲೆ ವರದಿಯನ್ನು ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿ ಅದೇ ದಿನ ಚಾಸಾ-27 ರವರಿಂದ ಅಭಿಪ್ರಾಯ ಪತ್ರವನ್ನು ಸಹ ಪಡೆದುಕೊಂಡಿರುತ್ತೇನೆ.

ದಿನಾಂಕ 06.01.2015 ರಂದು ಮೃತ ನಿಂಗಮ್ಮ ರವರ ಸಾವಿನ ಬಗ್ಗೆ ಅಂತಿಮ ವರದಿಯನ್ನು ನೀಡುವಂತೆ ಚಾಸಾ-27 ರವರಿಗೆ ಮನವಿ ಪತ್ರವನ್ನು ಬರೆದು, ದಿನಾಂಕ 09.01.2015 ರಂದು ಚಾಸಾ-27 ರವರಿಂದ ಅಭಿಪ್ರಾಯವನ್ನು ಪಡೆದಿರುತ್ತೇನೆ.

ದಿನಾಂಕ 12.01.2015 ರಂದು ಮೃತ ನಿಂಗಮ್ಮ ರವರ ಸಾವಿನ ಬಗ್ಗೆ ಹೆಚ್ಚಿನ ಅಭಿಪ್ರಾಯವನ್ನು ನೀಡುವಂತೆ ಚಾಸಾ-27 ರವರಿಗೆ ಮನವಿ ಪತ್ರವನ್ನು ಬರೆದು, ಅದೇ ದಿನ ಚಾಸಾ-27 ರವರಿಂದ ಹೆಚ್ಚಿನ ಅಭಿಪ್ರಾಯವನ್ನು ಪಡೆದಿರುತ್ತೇನೆ.

ದಿನಾಂಕ 14.02.2015 ರಂದು ಈ ಪ್ರಕರಣದ ಸಮಗ್ರ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಇದ್ದ ಕಾರಣ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಿಪಿ.2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು, ನಿಪಿ.3 ಮತ್ತು ನಿಪಿ.4 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.3(ಎ) ಮತ್ತು ನಿಪಿ.4(ಎ) ಎಂದು, ನಿಪಿ.5 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು, ನಿಪಿ.6 ರಿಂದ ನಿಪಿ.11 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.6(ಎ) ರಿಂದ ನಿಪಿ.11(ಎ) ಎಂದು, ನಿಪಿ.12 ರಿಂದ ನಿಪಿ.14 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.12(ಬಿ) ಮತ್ತು (ಸಿ), ನಿಪಿ.13(ಬಿ) ಮತ್ತು ನಿಪಿ.14(ಬಿ) ಎಂದು, ಪುನಃ ನಿಪಿ.13 ಎಂದು ಗುರುತಿಸಲಾದ ಡಿಮಾಂಡ್ ರಿಜಿಸ್ಟರ್ ನ ದೃಢಿಕೃತ ನಕಲಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು, ನಿಪಿ.15 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಬಿ) ಮತ್ತು (ಸಿ) ಎಂದು, ನಿಪಿ.16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು, ನಿಪಿ.17 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು, ನಿಪಿ.18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಬಿ) ಮತ್ತು (ಸಿ) ಎಂದು, ಸ್ಥಳ ನಕಾಶೆಯನ್ನು ನಿಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು, ದಿನಾಂಕ 12.02.2025 ರಂದು ಬರೆದ ಪತ್ರವನ್ನು ನಿಪಿ.20 ಎಂದು, ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು, ಎಫ್.ಎಸ್.ಎಲ್ ವರದಿಯನ್ನು ನಿಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು, ಎಮ್.ಎಲ್.ಸಿ ಮೆಮೋವನ್ನು ನಿಪಿ.22 ಎಂದು, ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು.

ಮುದ್ದೆ ಮಾಲು-1 ರಿಂದ 3 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ 1 ಮತ್ತು 3 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಯತರ ಪರ ಶ್ರೀ.ಹೆಚ್.ಕೆ.ಸಿ. ವಕೀಲರಿಂದಃ</u>**

1. ಯಾವುದೇ ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ದಾಖಲಾದರೆ ನನ್ನ ಗಮನಕ್ಕೆ ಬರುತ್ತದೆ ಎಂದರೆ ಸರಿ. ದಿನಾಂಕ 26.09.2014 ರಂದು ನಿಂಗಮ್ಮರವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿದ್ದರು. ಅದೇ ದಿನದಂದು ನಿಂಗಮ್ಮರವರು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾದ ಬಗ್ಗೆ ಸಾಲಿಗ್ರಾಮ ಪೋಲಿಸ್ ಠಾಣೆಗೆ ಎಮ್.ಎಲ್.ಸಿ ಮಾಹಿತಿ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಂಗಮ್ಮರವರು ಚಿಕಿತ್ಸೆಗೆ ಹೋಗಿದ್ದು, ಶನಿವಾರ ಮತ್ತು ಭಾನುವಾರ ವೈದ್ಯರು ಲಭ್ಯವಿರದಿದ್ದ ಕಾರಣ ನಿಂಗಮ್ಮರವರನ್ನು ವಾಪಸ್ಸು ಮನೆಗೆ ಕರೆದುಕೊಂಡು ಹೋಗಿ ನಂತರ ದಿನಾಂಕ 01.10.2014 ರಂದು ಚಿಕಿತ್ಸೆಗಾಗಿ ನಿಂಗಮ್ಮರವರನ್ನು ಕೆ.ಆರ್.ನಗರದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

2. ದಿನಾಂಕ 29.09.2014 ರಿಂದ ದಿನಾಂಕ 01.10.2014 ರವರೆಗಿನ 5 ದಿನಗಳ ಅಂತರದಲ್ಲಿ ನಿಂಗಮ್ಮರವರು ಬೇರೆ ಎಲ್ಲಿಯು ಸಹ ಚಿಕಿತ್ಸೆಯನ್ನು ಪಡೆದಿರುವುದಿಲ್ಲ.

ಸಾಮಾನ್ಯವಾಗಿ ಭಾನುವಾರ ಹೊರತುಪಡಿಸಿ ವಾರದ ಇತರೆ ಎಲ್ಲಾ ದಿನಗಳಲ್ಲಿಯು ಸಹ ಸರಕಾರಿ ಆಸ್ಪತ್ರೆಗಳಲ್ಲಿ ನುರಿತ ವೈದ್ಯರು ಇರುತ್ತಾರೆ ಎಂದರೆ ಸರಿ. ದಿನಾಂಕ 26.09.2014 ರಿಂದ ದಿನಾಂಕ 02.10.2014 ರವರೆಗೆ ಘಟನೆಯ ಸಂಬಂಧ ಯಾರು ಸಹ ಠಾಣೆಗೆ ಬಂದು ದೂರನ್ನು ನೀಡಿರುವುದಿಲ್ಲ.

3. ಯಾವುದೇ ಗಾಯಾಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋದಂತಹ ಸಂದರ್ಭದಲ್ಲಿ ಗಾಯಾಳು ಅಥವಾ ಅವರ ಸಂಬಂಧಿಕರು ಘಟನೆಯ ಸಮಯ ಮತ್ತು ಘಟನೆಯ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ ಎಂದರೆ ಸರಿ. ನಿಂಗಮ್ಮರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕಳಿಸುವಂತೆ ನಿಪಿ.13 ರಲ್ಲಿ ವೈದ್ಯಾಧಿಕಾರಿಯವರು ನಮೂದಿಸಿದ್ದು, ಅದರ ಪ್ರಕಾರ ನಿಂಗಮ್ಮರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಯಾಕೆ ಕರೆದುಕೊಂಡು ಹೋಗಿರುವುದಿಲ್ಲ ನಾನು ಚಾಸಾ–1 ರವರನ್ನು ವಿಚಾರಿಸಿರುತ್ತೇನೆ. ಚಾಸಾ–1 ರವರನ್ನು ನಾನು ಸದರಿ ವಿಷಯದ ಬಗ್ಗೆ ವಿಚಾರಿಸಿರುವುದನ್ನು ನನ್ನ ತನಿಖಾ ಡೈರಿಯಲ್ಲಿ ನಮೂದಿಸಿರುತ್ತೇನೆ. ಸತ್ಯಾಂಶ ಹೊರಬೀಳುತ್ತದೆ ಎನ್ನುವ ಉದ್ದೇಶದಿಂದ ನಾನು ಸದರಿ ವಿಷಯವನ್ನು ಚಾಸಾ–1 ರವರ ಹೇಳಿಕೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ಮರಣೋತ್ತರ ಪರೀಕ್ಷೆ ನಡೆದ ಬಳಿಕ ಮಧ್ಯಾಹ್ನ 12.00 ಗಂಟೆಗೆ ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿರುತ್ತೇನೆ. ನಿಂಗಮ್ಮರವರ ಮರಣೋತ್ತರ ಪರೀಕ್ಷೆಯು ಕೆ ಆರ್ ನಗರದ ಸರಕಾರಿ ಆಸ್ಪತ್ರೆಯಲ್ಲಿ ನಡೆದಿರುತ್ತದೆ ಎಂದರೆ ಸರಿ. ಮೃತ ನಿಂಗಮ್ಮ ಮತ್ತು ಅವರ ವಾರಸುದಾರರು ಸಾಲಿಗ್ರಾಮದ ರಾಂಪುರ ಗ್ರಾಮದ ನಿವಾಸಿಗಳು ಎಂದರೆ ಸರಿ. ಕೆ ಆರ್ ನಗರದಿಂದ ರಾಂಪುರಕ್ಕೆ ಹೋಗಲು 45 ನಿಮಿಷಗಳ ಕಾಲಾವಕಾಶ ಬೇಕಾಗುತ್ತದೆ ಎಂದರೆ ಸಾಕ್ಷಿಯು ಅರ್ಧ ಗಂಟೆಗಳ ಕಾಲಾವಕಾಶ ಸಾಕಾಗುತ್ತದೆ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಹಿಂದು ಸಂಪ್ರದಾಯದಂತೆ ಶವ ಸಂಸ್ಕಾರದ ವಿಧಿ ವಿಧಾನಗಳನ್ನು ಪೂರೈಸಲು ಕನಿಷ್ಠ 3 ಗಂಟೆಗಳ ಕಾಲಾವಕಾಶ ಬೇಕಾಗುತ್ತದೆ ಎಂದರೆ ಸಾಕ್ಷಿಯು ಅದು ಆಯಾ ಮೃತರ ಕುಟುಂಬಸ್ಥರ ಮೇಲೆ ಅವಲಂಬಿಸಿರುತ್ತದೆ ಹಾಗಾಗಿ ಅದರ ಬಗ್ಗೆ ನನಗೆ ಹೇಳಲಾಗುವುದಿಲ್ಲ ಎಂದು ನುಡಿದಿರುತ್ತಾರೆ.

5. ಘೋರ ಅಪರಾಧ ಪ್ರಕರಣಗಳಲ್ಲಿ ಸ್ಥಳ ಮಹಜರು ಮಾಡುವ ಪೂರ್ವದಲ್ಲಿ ಪಂಚರಿಗೆ ನೋಟಿಸು ನೀಡಬೇಕಾಗುತ್ತದೆ ಎಂದರೆ ಸರಿ. ನಿಪಿ.2 ರ ಸ್ಥಳ ಮಹಜರು ಮಾಡುವ ಎಷ್ಟು ಗಂಟೆ ಪೂರ್ವದಲ್ಲಿ ನಾನು ಪಂಚರಿಗೆ ನೋಟಿಸನ್ನು ನೀಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಚಾಸಾ–5 ರಿಂದ 11 ರವರ ಹೇಳಿಕೆಗಳನ್ನು ನಾನು ಸದರಿ ದಿನದಂದು ಮಧ್ಯಾಹ್ನ 3.30 ಗಂಟೆಯ ಬಳಿಕ ಪಡೆದಿರುತ್ತೇನೆ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.2 ರ ಮಹಜರು ಮಾಡಲಾಗಿದೆ

ಎನ್ನುವ ದಿನದಂದು ಮೃತರ ಶವ ಸಂಸ್ಕಾರ ಇದ್ದ ಕಾರಣ ಚಾಸಾ-1, ಚಾಸಾ-5 ಮತ್ತು 6 ರವರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಹಾಗೂ ನಿಪಿ.2 ಕ್ಕೆ ತಮ್ಮ ಸಹಿಗಳನ್ನು ಮಾಡಿರಲಿಲ್ಲ ಬದಲಾಗಿ ಅವರು ಮೃತರ ಶವ ಸಂಸ್ಕಾರದಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ದಿನಾಂಕ 02.10.2014 ರಂದು ನಾನು ನಿಪಿ.2 ರ ಮಹಜರನ್ನು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸಾಮಾನ್ಯವಾಗಿ ಸ್ಥಳ ನಕಾಶೆಗೆ ಸಾಕ್ಷಿದಾರರ ಸಹಿಗಳನ್ನು ನಾವು ಪಡೆಯುವುದಿಲ್ಲ ಆದ ಕಾರಣ ನಿಪಿ.19 ರಲ್ಲಿ ನಾನು ಸಾಕ್ಷಿದಾರರ ಸಹಿಗಳನ್ನು ಪಡೆದಿರುವುದಿಲ್ಲ. ಚಾಸಾ-1 ಮತ್ತು ಆರೋಪಿತರಿಗೂ ಹಿಂದಿನಿಂದಲೂ ವೈಶಮ್ಯ ಇರುವುದಾಗಿ ನಮೂದಾಗಿದ್ದು, ಸದರಿ ವೈಶಮ್ಯದ ಸಂಬಂಧ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದಾದರೂ ಪ್ರಕರಣ ದಾಖಲಾಗಿರುತ್ತದೆಯೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

7. ದಿನಾಂಕ 26.09.2014 ರಿಂದ ನಿಂಗಮ್ಮರವರು ಮರಣ ಹೊಂದುವರೆಗೂ ನಮ್ಮ ಯಾವುದೇ ಪೋಲಿಸ್ ಸಿಬ್ಬಂದಿಗಳು ನಿಂಗಮ್ಮರವರನ್ನು ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಂಗಮ್ಮರವರನ್ನು ಪೋಲಿಸ್ ಸಿಬ್ಬಂದಿಗಳು ವಿಚಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಿಂಗಮ್ಮರವರು ಗಾಯಾಳು ಆಗಿದ್ದಾಗ ಪೋಲಿಸರು ಅವರನ್ನು ವಿಚಾರಿಸಿದ ಬಗ್ಗೆ ದೋಷಾರೋಪಣ ಪಟ್ಟಿಯಲ್ಲಿ ನೀವು ಉಲ್ಲೇಖಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಗಾಯಾಳು ನಿಂಗಮ್ಮರವರನ್ನು ವಿಚಾರಿಸಿದ ಬಗ್ಗೆ ದೂರಿನಲ್ಲಿಯೇ ನಮೂದಾಗಿದ್ದು, ಸದರಿ ವಿಷಯವನ್ನು ನನ್ನ ತನಿಖಾ ಡೈರಿಯಲ್ಲಿ ನಮೂದಿಸಿದ್ದು, ದೋಷಾರೋಪಣ ಪಟ್ಟಿಯಲ್ಲಿ ಉಲ್ಲೇಖಿಸಿರುವುದಿಲ್ಲ.

8. ನಿಂಗಮ್ಮರವರಿಗೆ 80 ವರ್ಷ ವಯಸ್ಸಾಗಿದ್ದ ಕಾರಣ ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಂಗಮ್ಮರವರಿಗೆ 80 ವರ್ಷ ವಯಸ್ಸಾಗಿದ್ದ ಕಾರಣ ಅವರು ಊರುಗೋಲಿನ ಸಹಾಯದಿಂದ ನಡೆಯುತ್ತಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಕೃತ್ಯ ನಡೆದ ಸ್ಥಳದ ರಸ್ತೆಯು ಮಣ್ಣಿನ ರಸ್ತೆ ಆಗಿದ್ದು, ಕಲ್ಲುಗಳಿಂದ ಕೂಡಿತ್ತು. ನಿಂಗಮ್ಮರವರಿಗೆ ವಯೋಸಹಜ ಕಾಯಿಲೆ ಇದ್ದು, ತಾವು ಊರುಗೋಲಿನ ಸಹಾಯದಿಂದ ನಡೆದುಕೊಂಡು ಹೋಗುತ್ತಿದ್ದಾಗ ಕಲ್ಲುಗಳಿಂದ ಕೂಡಿದ್ದ ರಸ್ತೆಯ ಮೇಲೆ ತಾವೇ ಸ್ವತಃ ಬಿದ್ದು ಹೃದಯಾಘಾತವಾಗಿ ಮರಣ ಹೊಂದಿರುತ್ತಾರೆಯೇ ವಿನಹಃ ಆರೋಪಿತರು ನಿಂಗಮ್ಮರವರಿಗೆ ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ ಮತ್ತು ನಿಂಗಮ್ಮರವರನ್ನು ತಳ್ಳಿರುವುದಿಲ್ಲ ಎಂದರೆ ಸರಿಯಲ್ಲ.

9. ನಿಂಗಮ್ಮ ರವರು ತಾವೇ ಸ್ವತಃ ಬಿದ್ದು ಮಾಡಿಕೊಂಡ ಗಾಯಗಳಿಗೆ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಕೊಡಿಸುವಂತೆ ಚಾಸಾ–1 ರವರಿಗೆ ನಿಪಿ.13 ರಲ್ಲಿ ವೈದ್ಯರು ತಿಳಿಸಿದ್ದರು ಸಹ ಚಾಸಾ–1 ರವರು ನಿಂಗಮ್ಮರವರಿಗೆ ಸರಿಯಾದ ಚಿಕಿತ್ಸೆಯನ್ನು ಕೊಡಿಸದೇ ನಿಂಗಮ್ಮರವರು ತಾವೇ ಸ್ವತಃ ಬಿದ್ದು ಮಾಡಿಕೊಂಡ ಗಾಯಗಳಿಂದ ಹೃದಯಾಘಾತವಾಗಿ ಮರಣ ಹೊಂದಿರುತ್ತಾರೆಯೇ ವಿನಹಃ ಆರೋಪಿತರು ನಿಂಗಮ್ಮರವರಿಗೆ ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಘಟನೆಯ ಸತ್ಯ ಸತ್ಯತೆಗಳನ್ನು ಸರಿಯಾಗಿ ಪರಿಶೀಲಿಸದೆ ಕೇವಲ ರಾಜಕೀಯ ಪ್ರೇರಣೆಯಿಂದ ನಾನು ಆರೋಪಿತರ ವಿರುದ್ಧ ಈ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ